**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालयः**
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## ೧೮.೧೦.೨೦೧೬ರಂದು ನಡೆದ ಪ್ರಶಿಕ್ಷಣ ಪರಿಷತ್ (ಅಕಾಡೆಮಿಕ್ ಕೌನ್ಸಿಲ್) ೧೮ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಿಕ್ಷಣ ಪರಿಷತ್‌ನ ೧೮ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಅಕ್ಟೋಬರ್ ೧೮, ೨೦೧೬ರ ಮಂಗಳವಾರ ಬೆಳಿಗ್ಗೆ ೧೧.೦೦** ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಪದ್ಮಾಶೇಖರ್,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀ ಬಿ.ಎನ್. ಹೊಸೂರ,** ಸವದತ್ತಿ | ಸದಸ್ಯರು |
| ೩. | **ಡಾ. ಎಂ.ಎ. ಶೃತಿಕೀರ್ತಿ,** ಮತ್ತೂರು | ಸದಸ್ಯರು |
| ೪. | **ಶ್ರೀ ಡಿ.ಪಿ. ಅನಂತ,** ಬೆಂಗಳೂರು | ಸದಸ್ಯರು |
| ೫. | **ರಾಜಗುರು ಡಾ. ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ,** ಕವಲೇದುರ್ಗ | ಸದಸ್ಯರು |
| ೬. | **ಡಾ. ಎನ್.ಕೆ. ರಾಮಶೇಷನ್,** ಮೈಸೂರು | ಸದಸ್ಯರು |
| ೭. | **ಡಾ. ಎಸ್. ವೇಣುಗೋಪಾಲ್,** ಮೈಸೂರು | ಸದಸ್ಯರು |
| ೮. | **ಡಾ. ಸಿ. ನಂಜುಂಡಯ್ಯ,** ಪ್ರಾಚಾರ್ಯರು, ಆದಿಚುಂಚನಗಿರಿ | ಸದಸ್ಯರು |
| ೯. | **ಡಾ. ಎಚ್. ಸತ್ಯನಾರಾಯಣ ರಾವ್,** ಪ್ರಾಚಾರ್ಯರು, ಬೆಂಗಳೂರು | ಸದಸ್ಯರು |
| ೧೦. | **ವಿದ್ವಾನ್ ಜಿ.ಸಿ. ರಾಜಶೇಖರಯ್ಯ,** ಪ್ರಾಚಾರ್ಯರು, ತುಮಕೂರು | ಸದಸ್ಯರು |
| ೧೧. | **ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ,** ಡೀನ್, ವೇದಾಂತ ನಿಕಾಯ | ಸದಸ್ಯರು |
| ೧೨. | **ಪ್ರೊ. ಶ್ರೀನಿವಾಸ ವರಖೇಡಿ,** ಡೀನ್, ಶಾಸ್ತ್ರನಿಕಾಯ | ಸದಸ್ಯರು |
| ೧೩. | **ಡಾ. ವಿ. ಗಿರೀಶ್‌ಚಂದ್ರ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೧೪. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ,** ಚಿತ್ರದುರ್ಗ | ಸದಸ್ಯರು |
| ೭. | **ಶ್ರೀ ಯೋಗೇಶಬಾಬು,** ಬಿ.ಜಿ. ಕೆರೆ, ಮೊಳಕಾಲ್ಮೂರು ತಾ. | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| ವಿ.ಸಂ. | ವಿಷಯ, ಟಿಪ್ಪಣಿ ಮತ್ತು ನಿರ್ಣಯ | |
|---|---|---|
| ವಿಷಯ 01 | **ವಿಷಯ ಮತ್ತು ಟಿಪ್ಪಣಿ** | **ವಿದ್ವನ್ಮಧ್ಯಮಾ–ಬಿ.ಎ ಹಾಗೂ ವಿದ್ವದುತ್ತಮಾ–ಎಂ.ಎ ತರಗತಿಗಳ ಪ್ರವೇಶದ ಪರಿನಿಯಮವನ್ನು ಅನುಮೋದಿಸುವ ಬಗೆಗೆ.**<br>ವಿಶ್ವವಿದ್ಯಾಲಯವು ಈಗಾಗಲೇ 2014–15ನೇ ಸಾಲಿನಿಂದ ವಿದ್ವನ್ಮಧ್ಯಮಾ–ಬಿ.ಎ ಹಾಗೂ ವಿದ್ವದುತ್ತಮಾ–ಎಂ.ಎ ತರಗತಿಗಳನ್ನು ನಡೆಸುತ್ತಿದ್ದು, ಪ್ರವೇಶದ ಪರಿನಿಯಮವನ್ನು ಯುಜಿಸಿಯ ಸೆಮಿಸ್ಟರ್ (ಸಿ.ಬಿ.ಸಿ.ಎಸ್) ನಿಯಮದ ಪ್ರಕಾರ ಪ್ರವೇಶವನ್ನು ಮಾಡಿಕೊಂಡು ತರಗತಿಗಳನ್ನು ನಡೆಸುತ್ತಿರುವ ವಿಷಯವನ್ನು ಪ್ರಶಿಕ್ಷಣ ಪರಿಷತ್ತಿನ ಅವಗಾಹನೆಗಾಗಿ ಮಂಡಿಸಿದೆ. |
| | ನಿರ್ಣಯ | **ವಿದ್ವನ್ಮಧ್ಯಮಾ–ಬಿ.ಎ. ಹಾಗೂ ವಿದ್ವದುತ್ತಮಾ–ಎಂ.ಎ. ತರಗತಿಗಳ ಪ್ರವೇಶದ ಪರಿನಿಯಮವನ್ನು ಮತ್ತೊಮ್ಮೆ ಯು.ಜಿ.ಸಿ ನಿಯಮಗಳ ಅನ್ವಯ ಸಮೀಕರಿಸಿಕೊಂಡು ಕ್ರಮವಹಿಸಲು ಸಭೆಯು ಸೂಚಿಸಿತು.** |

| | | |
|---|---|---|
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **ವಿದ್ವನ್ಮಧ್ಯಮಾ–ಬಿ.ಎ ಹಾಗೂ ವಿದ್ವದುತ್ತಮಾ–ಎಂ.ಎ ತರಗತಿಗಳಿಗೆ ಏಕರೂಪ ವೇಳಾಪಟ್ಟಿಯನ್ನು ಜಾರಿಗೊಳಿಸುವ ಬಗೆಗೆ.**<br>ಕರ್ನಾಟಕ ಸರ್ಕಾರವು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು 2016–17ನೇ ಸಾಲಿನಿಂದ ಅನ್ವಯವಾಗುವಂತೆ ವಿದ್ವನ್ಮಧ್ಯಮಾ–ಬಿ.ಎ ಹಾಗೂ ವಿದ್ವದುತ್ತಮಾ–ಎಂ.ಎ ತರಗತಿಗಳಿಗೆ ಏಕರೂಪ ವೇಳಾಪಟ್ಟಿಯನ್ನು ಜಾರಿಗೊಳಿಸಲು ಆದೇಶಿಸಿದೆ. ಆದರೆ, 2016–17ರಿಂದ ಸಿ.ಬಿ.ಸಿ.ಎಸ್ ಅಳವಡಿಸಿ ವಿವಿಯಲ್ಲಿ ಎಂಎ ಮತ್ತು ಇನ್ನುಳಿದ ವಿವಿಗಳಲ್ಲಿ ಏಕರೂಪ ವೇಳಾಪಟ್ಟಿ ಜಾರಿಗೊಳಿಸಬಹುದಾಗಿದೆ. ಬಿ.ಎ–ಶಾಸ್ತ್ರೀ 2017–18ರಿಂದ ಸೆಮಿಸ್ಟರ್ ನಡೆಸಲು ತೀರ್ಮಾನಿಸಿರುವ ಹಿನ್ನೆಲೆಯಲ್ಲಿ ಕಳೆದ ಸಾಲಿನ ವೇಳಾಪಟ್ಟಿಯನ್ನು ಅನುಸರಿಸಬಹುದಾಗಿದೆ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸರ್ಕಾರಿ ಆದೇಶದನ್ವಯ ವೇಳಾಪಟ್ಟಿಯನ್ನು ಪುನಾರೂಪಿಸಿ ಅಳವಡಿಸಿಕೊಳ್ಳಲು ಸಭೆಯು ಸೂಚಿಸಿತು.** |
| ವಿಷಯ 03 | ವಿಷಯ ಮತ್ತು ಟಿಪ್ಪಣಿ | **ಜ್ಯೋತಿಷ್ಯ ಸರ್ಟಿಪಿಕೇಟ್/ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡುವ ಬಗೆಗೆ.**<br>ವಿಶ್ವವಿದ್ಯಾಲಯವು ಪ್ರತಿ ವರ್ಷವು ನಡೆಸುವ ವಿದ್ವನ್ಮಧ್ಯಮಾ–ಬಿ.ಎ ಹಾಗೂ ವಿದ್ವದುತ್ತಮಾ–ಎಂ.ಎ ತರಗತಿಗಳ ಉತ್ತೀರ್ಣವಾದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡುತ್ತಿದ್ದು, ನಮ್ಮ ವಿಶ್ವವಿದ್ಯಾಲಯದಿಂದ ನಡೆಸುವ ಜ್ಯೋತಿಷ್ಯ ಸರ್ಟಿಪಿಕೇಟ್/ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಲು ಅನುಮೋದನೆಯನ್ನು ಕೋರಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ಜ್ಯೋತಿಷ್ಯ ಸರ್ಟಿಪಿಕೇಟ್/ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಲು ಸಭೆಯು ಅನುಮೋದನೆ ನೀಡಿತು.** |
| ವಿಷಯ 04 | ವಿಷಯ ಮತ್ತು ಟಿಪ್ಪಣಿ | **ವಿದ್ವನ್ಮಧ್ಯಮಾ–ಬಿ.ಎ ಹಾಗೂ ವಿದ್ವದುತ್ತಮಾ–ಎಂ.ಎ ತರಗತಿಗಳಿಗೆ ವಿಷಯಗಳ ಪಾಠ್ಯಕ್ರಮಗಳ ಅನುಮೋದನೆಯ ಬಗೆಗೆ**<br>ಬಿ.ಎ–ವಿದ್ವನ್ಮಧ್ಯಮಾ ತರಗತಿಗಳಿಗೆ ಮತ್ತು ವಿದ್ವದುತ್ತಮಾ–ಎಂ.ಎ ತರಗತಿಗಳಿಗೆ ವಿಷಯಗಳ ಪಾಠ್ಯಕ್ರಮಗಳನ್ನು ಅಧ್ಯಯನ ಮಂಡಳಿಯ ಮೂಲಕ ಸಿದ್ಧಪಡಿಸಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ ಮತ್ತು 2016–17ನೇ ಸಾಲಿನಿಂದ ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ವಿದ್ವನ್ಮಧ್ಯಮಾ–ಬಿ.ಎ ಹಾಗೂ ವಿದ್ವದುತ್ತಮಾ–ಎಂ.ಎ ತರಗತಿಗಳಿಗೆ ವಿಷಯಗಳ ಪಾಠ್ಯಕ್ರಮಗಳಿಗೆ ಸಭೆಯು ಅನುಮೋದನೆ ನೀಡಿತು.** |
| ವಿಷಯ 05 | ವಿಷಯ ಮತ್ತು ಟಿಪ್ಪಣಿ | **ಎಂ.ಫಿಲ್ ಹಾಗೂ ಪಿಎಚ್.ಡಿ ಮಾರ್ಗದರ್ಶಕರಿಗೆ ಅನುಮತಿ ನೀಡುವ ಬಗೆಗೆ**<br>ಎಂ.ಫಿಲ್ ಹಾಗೂ ಪಿಎಚ್.ಡಿ ತರಗತಿಗಳ ಮಾರ್ಗದರ್ಶಕರಾಗಲು ಬಯಸಿ ಅನೇಕರು ಅರ್ಜಿ ಸಲ್ಲಿಸಲಾಗಿದ್ದು ಸದರಿ ಅರ್ಜಿಗಳನ್ನು ಪರಿಶೀಲಿಸಿ ವಿವಿಯ ಪಿಎಚ್.ಡಿ ರೆಗ್ಯುಲೇಷನ್ ಅನ್ವಯ ಮಾರ್ಗದರ್ಶನ ನೀಡಲು ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಪಿಎಚ್.ಡಿ ರೆಗ್ಯುಲೇಷನ್‌ಗಳನ್ನು ಕಡ್ಡಾಯವಾಗಿ ಪಾಲಿಸುತ್ತಾ, ಈಗಿರುವ ಮಾರ್ಗದರ್ಶಕರನ್ನು ಉಳಿಸಿಕೊಂಡು, ಅವರು ಯುಜಿಸಿ ರೆಗ್ಯುಲೇಷನ್‌ಗಳನ್ನು ಪೂರೈಸದಿದ್ದಲ್ಲಿ ಇನ್ನು ಮುಂದೆ ಪಿಎಚ್.ಡಿ. ಮಾರ್ಗದರ್ಶಕರಾಗಲು ಅವಕಾಶವಿಲ್ಲವೆಂದು ಸಭೆಯು ನಿರ್ಣಯಿಸಿತು. ಸರ್ಕಾರಿ ಆದೇಶಗಳನ್ನು ಹಾಗೂ ಪಿಎಚ್.ಡಿ. ರೆಗ್ಯುಲೇಷನ್‌ಗಳನ್ವಯ ಕ್ರಮವಹಿಸಲು ಸಭೆಯು ಸೂಚಿಸಿತು.** |
| ವಿಷಯ 06 | ವಿಷಯ ಮತ್ತು ಟಿಪ್ಪಣಿ | **ಬಿ.ಎ, ಎಂ.ಎ, ಎಂ.ಫಿಲ್, ಪಿಎಚ್.ಡಿ, ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿಗದಿಗೊಳಿಸುವ ಬಗೆಗೆ**<br>ವಿಶ್ವವಿದ್ಯಾಲಯವು ಪ್ರತಿ ವರ್ಷವು ನಡೆಸುವ ಬಿ.ಎ, ಎಂ.ಎ, ಎಂ.ಫಿಲ್, ಪಿಎಚ್.ಡಿ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿಗದಿಗೊಳಿಸಬೇಕಾಗಿದೆ. ಈ ಸಂಬಂಧ ಕ್ರಮವಹಿಸಲು ಸಭೆಗೆ ಮಂಡಿಸಿದೆ. |
| | ನಿರ್ಣಯ | **ಪ್ರತಿಯೊಂದು ಕೋರ್ಸಿಗೆ ಬಿ.ಎ, ಎಂ.ಎ, ಎಂ.ಫಿಲ್, ಪಿಎಚ್.ಡಿ, ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಸಂಖ್ಯೆಯನ್ನು (Intake) ಈ ಕೆಳಕಂಡಂತೆ ನಿಗದಿಗೊಳಿಸಲು ಸಭೆಯು ಸೂಚಿಸಿತು.**<br>**ಬಿ.ಎ – 60**<br>**ಎಂ.ಎ – 50**<br>**ಎಂ.ಫಿಲ್ – 50**<br>**ಪಿಎಚ್.ಡಿ – 50**<br>**ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ – 50** |
| ವಿಷಯ 07 | ವಿಷಯ ಮತ್ತು ಟಿಪ್ಪಣಿ | **ಆನ್‌ಲೈನ್ ಮೂಲಕ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗೆಗೆ**<br>ವಿಶ್ವವಿದ್ಯಾಲಯವು ಪ್ರತಿ ವರ್ಷವು ನಡೆಸುವ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳನ್ನು |

| | | |
|---|---|---|
| | | ಕಲಿಯಲು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆನ್‌ಲೈನ್ ಮೂಲಕ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ಆನ್‌ಲೈನ್ ಮೂಲಕ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳನ್ನು ನಡೆಸಲು ಸಭೆಯು ಅನುಮೋದಿಸಿತು.** |
| ವಿಷಯ 08 | ವಿಷಯ ಮತ್ತು ಟಿಪ್ಪಣಿ | **ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ನಡೆಸುವ ಬಗೆಗೆ**<br>ವಿಶ್ವವಿದ್ಯಾಲಯವು ಪ್ರತಿ ವರ್ಷವು ಹಲವಾರು ವಿಚಾರ ಸಂಕಿರಣಗಳನ್ನು ನಡೆಸುತ್ತಿದ್ದು ಈಗಾಗಲೇ "ಭಕ್ತಿಪರಂಪರೆ" ವಿಷಯದಲ್ಲಿ ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ಯಶಸ್ವಿಯಾಗಿ ನಡೆಸಿರುತ್ತದೆ. ಅಲ್ಲದೇ, "ಪುನರ್‌ಜನ್ಮ" ವಿಷಯದಲ್ಲಿ ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ನಡೆಸಲು ಬಯಸಿ ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ನವದೆಹಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ಧನಸಹಾಯದೊಂದಿಗೆ ನಡೆಸಲು ಸಭೆಯು ಸೂಚಿಸಿತು.** |
| ವಿಷಯ 09 | ವಿಷಯ ಮತ್ತು ಟಿಪ್ಪಣಿ | **ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸುವ ಬಗೆಗೆ**<br>ಅಖಿಲ ಭಾರತ ಮಟ್ಟದ ಸ್ಪರ್ಧೆಗಳು ಡಿಸೆಂಬರ್ 28, 29 ರಂದು ತ್ರಿಪುರದಲ್ಲಿ ನಡೆಯಲಿದ್ದು, ಅದಕ್ಕಿಂತ ಪೂರ್ವಭಾವಿಯಾಗಿ ಪ್ರತಿವರ್ಷದಂತೆ 2016–17ನೇ ಸಾಲಿನ ರಾಜ್ಯಮಟ್ಟದ ಸ್ಪರ್ಧೆಗಳನ್ನು ವಿಶ್ವವಿದ್ಯಾಲಯದಿಂದ ಆಯೋಜಿಸಬೇಕಾಗಿರುವುದರಿಂದ ನವೆಂಬರ್ 2 ಮತ್ತು 3ರಂದು ಉಡುಪಿಯಲ್ಲಿ ನಡೆಸಲು ಮಂಡಿಸಿದೆ. |
| | ನಿರ್ಣಯ | **ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸಲು ಸಭೆಯು ಒಪ್ಪಿತು.** |
| ವಿಷಯ 10 | ವಿಷಯ ಮತ್ತು ಟಿಪ್ಪಣಿ | **ವಿದ್ವನ್ಮಧ್ಯಮಾ–ಬಿ.ಎ ಹಾಗೂ ವಿದ್ವದುತ್ತಮಾ–ಎಂ.ಎ ತರಗತಿಗಳನ್ನು ಖಾಸಗಿಯಾಗಿ ಬರೆಯುವ ವಿಷಯದ ಬಗೆಗೆ**<br>ಬಿ.ಎ–ವಿದ್ವನ್ಮಧ್ಯಮಾ ತರಗತಿಗಳಿಗೆ ಮತ್ತು ವಿದ್ವದುತ್ತಮಾ–ಎಂ.ಎ ತರಗತಿಗಳನ್ನು ಖಾಸಗಿಯಾಗಿ ಪ್ರವೇಶ ಪಡೆದು ಪರೀಕ್ಷೆ ಬರೆಯುಲು ಅವಕಾಶ ನೀಡಲಾಗುತ್ತಿತ್ತು. ಯುಜಿಸಿ ನಿಯಮಾವಳಿಯ ಹಿನ್ನೆಲೆಯಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ 2016–17ನೇ ಸಾಲಿಗೆ ಮಾನ್ಯರ ಮುಂದಿನ ನಿರ್ಣಯಕ್ಕಾಗಿ ಮಂಡಿಸಿದೆ. |
| | ನಿರ್ಣಯ | **ವಿದ್ವನ್ಮಧ್ಯಮಾ–ಬಿ.ಎ ಹಾಗೂ ವಿದ್ವದುತ್ತಮಾ–ಎಂ.ಎ ತರಗತಿಗಳನ್ನು ಖಾಸಗಿಯಾಗಿ ಬರೆಯುವ ವಿಷಯದ ಬಗ್ಗೆ ಯು.ಜಿ.ಸಿ ನಿಯಮಾನುಸಾರ ಅವಕಾಶವಿಲ್ಲದ ಕಾರಣ ಹಾಗೂ ಕರ್ನಾಟಕದ ಯಾವ ವಿಶ್ವವಿದ್ಯಾಲಯದಲ್ಲಿಯೂ ಇಂತಹ ಪರೀಕ್ಷಾ ಪದ್ಧತಿ ಇಲ್ಲದ ಕಾರಣ, ಇದನ್ನು ಒಪ್ಪಲು ಸಾಧ್ಯವಿಲ್ಲವೆಂದು ಸಭೆಯು ನಿರ್ಣಯಿಸಿತು.** |
| ವಿಷಯ 11 | ವಿಷಯ ಮತ್ತು ಟಿಪ್ಪಣಿ | **ಹಸ್ತಪ್ರತಿಶಾಸ್ತ್ರ ವಿಭಾಗದ ಯು.ಜಿ.ಸಿ. ವೇತನಶ್ರೇಣಿಯ ಅಧ್ಯಾಪಕರ ನೇಮಕಾತಿಗೆ ಮಾನದಂಡಗಳನ್ನು ರೂಪಿಸುವ ಬಗೆಗೆ.**<br>ಹಸ್ತಪ್ರತಿಶಾಸ್ತ್ರ ವಿಭಾಗದ ಯು.ಜಿ.ಸಿ. ವೇತನಶ್ರೇಣಿಯ ಅಧ್ಯಾಪಕರ ನೇಮಕಕ್ಕೆ ಸಂಬಂಧಿಸಿದಂತೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 24.09.2016ರಂದು ನಡೆದ ಸಭೆಯು ಯುಜಿಸಿಯ ನಿಯಮಾನುಸಾರ ಮಾನದಂಡಗಳನ್ನು ನಿಗದಿಪಡಿಸಿದೆ. ಅದನ್ನು ಅನುಮೋದಿಸಲು ಪ್ರಶಿಕ್ಷಣ ಪರಿಷತ್ತಿನ ಸಭೆಗೆ ಮಂಡಿಸಲಾಗಿದೆ. |
| | ನಿರ್ಣಯ | **ಹಸ್ತಪ್ರತಿಶಾಸ್ತ್ರ ವಿಭಾಗದ ಯು.ಜಿ.ಸಿ. ವೇತನಶ್ರೇಣಿಯ ಅಧ್ಯಾಪಕರ ನೇಮಕಾತಿಯ ಮಾನದಂಡಗಳನ್ನು ಸಭೆಯು ಅನುಮೋದಿಸಿತು.** |
| ವಿಷಯ 12 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯದ 2015–16ನೇ ಸಾಲಿನ ಆರ್ಥಿಕ ಲೆಕ್ಕಪರಿಶೋಧನೆಯನ್ನು ನಡೆಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2015–16ನೇ ಸಾಲಿನ ಜಮಾ ಮತ್ತು ಖರ್ಚಿನ ಲೆಕ್ಕಪತ್ರಗಳು ಅಂತಿಮಗೊಂಡಿದ್ದು, ದಿನಾಂಕ 08.09.2016ರಂದು ನಡೆದ ಹಣಕಾಸು ಸಮಿತಿಯಲ್ಲಿ ಮಂಡಿಸಲಾಯಿತು. 2015–16ನೇ ಸಾಲಿನ ಲೆಕ್ಕಪರಿಶೋಧನೆ ನಡೆಸಲು ಹಣಕಾಸು ಸಮಿತಿಯ ಒಪ್ಪಿಗೆ ದೊರೆತ ಹಿನ್ನೆಲೆಯಲ್ಲಿ ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದ 2015–16ನೇ ಸಾಲಿನ ಆರ್ಥಿಕ ಲೆಕ್ಕಪರಿಶೋಧನೆಯನ್ನು ನಡೆಸಲು ಸಭೆಯು ಒಪ್ಪಿತು.** |
| ವಿಷಯ 13 | ವಿಷಯ ಮತ್ತು ಟಿಪ್ಪಣಿ | **ಮೈಸೂರಿನ ಶಂಕರವಿಲಾಸ ಸಂಸ್ಕೃತ ಕಾಲೇಜು ಮತ್ತು ಕನಕಪುರದ ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಕಾಲೇಜುಗಳಲ್ಲಿ ಎಂ.ಎ. ತರಗತಿಗಳನ್ನು ನಡೆಸಲು ಅನುಮತಿ ನೀಡುವ ಬಗೆಗೆ.**<br>2014–15ನೇ ಸಾಲಿನಲ್ಲಿ ಎಂ.ಎ. ತರಗತಿಗಳನ್ನು ಪ್ರಾರಂಭಿಸಿರುವ ಈ ಸಂಸ್ಥೆ ತರಗತಿ ಪ್ರಾರಂಭಿಸಿ, ಆನಂತರ ಮಾನ್ಯತೆಯನ್ನು ಕೋರಿತ್ತು. ಆಗ ವಿದ್ಯಾರ್ಥಿಗಳ ಹಿತದೃಷ್ಟಿಯಲ್ಲಿ ಅಲ್ಲಿನ ವಿದ್ಯಾರ್ಥಿಗಳನ್ನು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪರೀಕ್ಷೆಗೆ ಕೂರಿಸಲಾಗಿತ್ತು. 2016–17ನೇ ಸಾಲಿನಲ್ಲೂ ಸಂಸ್ಥೆಯವರು ಅದನ್ನೇ ಪುನರಾವರ್ತನೆ ಮಾಡಿದ್ದಾರೆ. ಪ್ರಸ್ತುತ ಸಂಸ್ಥೆ ಸ್ವಂತ ಕಟ್ಟಡವನ್ನು ಹೊಂದಿದ್ದು, |

| | | |
|---|---|---|
| | | ವಿದ್ಯಾರ್ಹ ಅಧ್ಯಾಪಕರು ಅಲ್ಲಿ ಪಾಠಪ್ರವಚನ ಮಾಡುತ್ತಿರುವುದರಿಂದ, ಹಾಗೂ ಈಗಾಗಲೇ ಮಾನ್ಯತೆಗಾಗಿ ಅರ್ಜಿ ಶುಲ್ಕವನ್ನು ಕಟ್ಟಿರುವುದರಿಂದ ದಂಡಶುಲ್ಕ ವಿಧಿಸಿ ಮಾನ್ಯತೆ ಕೊಡಲು ಘಟನೋತ್ತರ ಅನುಮತಿಗಾಗಿ ಪ್ರಶಿಕ್ಷಣ ಪರಿಷತ್ತಿನ ಸಭೆಗೆ ಮಂಡಿಸಿದೆ. |
| | ನಿರ್ಣಯ | **ಮೈಸೂರಿನ ಶಂಕರವಿಲಾಸ ಕಾಲೇಜಿನಲ್ಲಿ ಎಂ.ಎ. ತರಗತಿಗಳನ್ನು ನಡೆಸಲು ತ್ರಿಸದಸ್ಯ ಸಮಿತಿಯು ಭೇಟಿ ನೀಡಿ ವರದಿ ನೀಡಿದ ನಂತರ, ಆ ವರದಿಯನ್ನು ಪರಿಶೀಲಿಸಿ ದಂಡಶುಲ್ಕ ತೆಗೆದುಕೊಂಡು ಅನುಮತಿ ನೀಡಲು ಸಭೆಯು ಸೂಚಿಸಿತು.**<br>**ನಿರ್ವಾಣಸ್ವಾಮಿ ಸಂಸ್ಕೃತ ಕಾಲೇಜು – ಈ ಕಾಲೇಜಿನ ಮಾನ್ಯತೆಯನ್ನು ನವೀಕರಿಸುವ ಮುನ್ನ ತ್ರಿಸದಸ್ಯ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ವರದಿಯನ್ನು ಗಮನಿಸಿ ಮಾನ್ಯತೆ ಮುಂದುವರೆಸಲು ಸಭೆಯು ಸೂಚಿಸಿತು.** |
| ವಿಷಯ 14 | ವಿಷಯ ಮತ್ತು ಟಿಪ್ಪಣಿ | **ವಿಶ್ವವಿದ್ಯಾಲಯಗಳ ಪರೀಕ್ಷೆಗಳಲ್ಲಿ ಕೃಪಾಂಕ (Grace marks)ಗಳನ್ನು ಜಾರಿಗೊಳಿಸುವ ಬಗೆಗೆ.**<br>ಸರ್ಕಾರದ ಪತ್ರ ಸಂಖ್ಯೆ: ಇಡಿ 46, ಯು.ಆರ್.ಸಿ 2016, ದಿನಾಂಕ: 24.02.2016ರ ಪ್ರಕಾರ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಾಮಾನ್ಯ ಸಭೆಯ ನಿರ್ಣಯದಂತೆ ರಚಿಸಲಾದ Uniform Regulations Governing the Award of Grace Marks in the University Examination in the state of Karnataka ಇದರ ಪ್ರತಿಯನ್ನು ಲಗತ್ತಿಸಿದೆ. ಇದನ್ನೇ ಯಥಾವತ್ತಾಗಿ ಮುಂದುವರೆಸಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗೆ ಸಲ್ಲಿಸಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಕೃಪಾಂಕ (Grace marks)ಗಳನ್ನು ಜಾರಿಗೊಳಿಸಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ರೂಪಿಸಿದ ನಿಯಮಾವಳಿಯನ್ನು ಅಳವಡಿಸಿಕೊಳ್ಳಲು ಸಭೆಯು ಅನುಮೋದಿಸಿತು.** |
| ವಿಷಯ 15 | ವಿಷಯ ಮತ್ತು ಟಿಪ್ಪಣಿ | **ಸೆಮಿಸ್ಟರ್ ಪದ್ಧತಿಯಲ್ಲಿ ಉತ್ತೀರ್ಣತಾ ಹಾಗೂ ಶ್ರೇಣಿ ಶೇಕಡವನ್ನು ನಿರ್ಧರಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ Board of Studies ತೀರ್ಮಾನಿಸಿರುವಂತೆ ಲಿಖಿತ ಪರೀಕ್ಷೆಗೆ ಶೇ. 70ರಷ್ಟು ಮತ್ತು ಆಂತರಿಕ ಪರೀಕ್ಷೆಗಳಿಗೆ ಶೇ. 30ರಷ್ಟು ನಿರ್ಣಯಿಸಲಾಗಿರುತ್ತದೆ. ಇತರೆ ವಿಶ್ವವಿದ್ಯಾಲಯಗಳಲ್ಲಿ ಲಿಖಿತ ಪರೀಕ್ಷೆಯಲ್ಲಿ ಶೇ. 35ರಷ್ಟು ಅಂಕಗಳು, ಲಿಖಿತ ಹಾಗೂ ಆಂತರಿಕ ಪರೀಕ್ಷೆಗಳಲ್ಲಿ ಒಟ್ಟಾರೆ ಶೇ.40ರಷ್ಟು ಅಂಕಗಳನ್ನು ಪಡೆದಲ್ಲಿ ಉತ್ತೀರ್ಣ ಎಂದು ಘೋಷಿಸಬಹುದಾಗಿದೆ. ಇದೇ ವ್ಯವಸ್ಥೆಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸೆಮಿಸ್ಟರ್ ಪದ್ಧತಿಯಲ್ಲಿ ನಡೆಯುವ ಎಂ.ಎ. ತರಗತಿಗಳಿಗೆ ಅಳವಡಿಸಿಕೊಳ್ಳಬಹುದಾಗಿರುತ್ತದೆ. ಈ ಬಗೆಗೆ ಪ್ರಶಿಕ್ಷಣ ಪರಿಷತ್ತಿನ ಅನುಮತಿ ಕೋರಿದೆ. |
| | ನಿರ್ಣಯ | **ಸೆಮಿಸ್ಟರ್ ಪದ್ಧತಿಯಲ್ಲಿ ಉತ್ತೀರ್ಣತಾ ಹಾಗೂ ಶ್ರೇಣಿ ಶೇಕಡವನ್ನು ನಿರ್ಧರಿಸಲು ಮೇಲ್ಕಂಡ ನಿಯಮವನ್ನು ಅಳವಡಿಸಿಕೊಳ್ಳಲು ಸಭೆಯು ಒಪ್ಪಿತು.** |
| ವಿಷಯ 16 | ವಿಷಯ ಮತ್ತು ಟಿಪ್ಪಣಿ | **ಘಟಿಕೋತ್ಸವಗಳಲ್ಲಿ ಸ್ವರ್ಣ ಪದಕ ನೀಡುವ ನಿಯಮಾವಳಿ ರಚಿಸುವ ಕುರಿತು**<br>ದಿನಾಂಕ: 14.03.2016ರಲ್ಲಿ ನಡೆದ ಪ್ರಶಿಕ್ಷಣ ಪರಿಷತ್ತಿನ 17ನೇ ಸಭೆಯ ನಿರ್ಣಯದಂತೆ ಎಂ.ಎ. ಆಚಾರ್ಯ ಪದವಿಗೆ ಘಟಿಕೋತ್ಸವಗಳಲ್ಲಿ ಸ್ವರ್ಣ ಪದಕ ನೀಡುವ ಬಗೆಗೆ ನಿಯಮಾವಳಿಯನ್ನು ರಚಿಸಲು ತೀರ್ಮಾನಿಸಲಾಗಿತ್ತು. ಈ ಬಗ್ಗೆ ಪರಶೀಲಿಸಿ ಈ ಕೆಳಕಂಡಂತೆ ನಿಯಮಗಳನ್ನು ಕ್ರೋಢೀಕರಿಸಿ ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗೆ ಸಲ್ಲಿಸಿದೆ.<br>a) ಯಾವ ಶಾಸ್ತ್ರಕ್ಕೆ ದತ್ತಿ ನಿಧಿಯನ್ನು ಸ್ಥಾಪಿಸಲಾಗಿರುತ್ತದೆಯೋ ಆಯಾ ಶಾಸ್ತ್ರಗಳಿಗೆ ಮಾತ್ರ ಆಯಾ ದತ್ತಿನಿಧಿಗಳ ಮೊತ್ತಕ್ಕನುಸಾರ ಪ್ರಮಾಣಕ್ಕನುಗುಣವಾಗಿ ಸ್ವರ್ಣ ಪದಕಗಳನ್ನು ನೀಡಲಾಗುವುದು.<br>b) ಯಾವುದೇ ವಿಷಯದಲ್ಲಿ ಸ್ವರ್ಣ ಪದಕವನ್ನು ನೀಡಲು ಕನಿಷ್ಠ ಶೇ. 60ರಷ್ಟು ಅಂಕಗಳು ಕಡ್ಡಾಯವಾಗಿರುತ್ತದೆ.<br>c) ಯಾವುದೇ ಶಾಸ್ತ್ರದಲ್ಲಿ ಎಷ್ಟೇ ವಿದ್ಯಾರ್ಥಿಗಳಿದ್ದರೂ ಒಂದು ಸ್ವರ್ಣ ಪದಕವನ್ನು ನೀಡಲಾಗುವುದು.<br>d) ಒಂದು ಶಾಸ್ತ್ರದಲ್ಲಿ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಸ್ವರ್ಣ ಪದಕವನ್ನು ನೀಡಲು ಅವಕಾಶವಿರುವುದಿಲ್ಲ.<br>e) ಕೃಪಾಂಕಗಳನ್ನು ಪಡೆದುಕೊಂಡು ಉತ್ತೀರ್ಣರಾದ ವಿದ್ಯಾರ್ಥಿಗಳು ಸ್ವರ್ಣಪದಕವನ್ನು ಪಡೆದುಕೊಳ್ಳಲು ಯೋಗ್ಯರಾಗಿರುವುದಿಲ್ಲ.<br>f) ಖಾಸಗೀ ವಿದ್ಯಾರ್ಥಿಗಳಿಗೆ ಸ್ವರ್ಣ ಪದಕವನ್ನು ನೀಡಲಾಗುವುದಿಲ್ಲ.<br>g) ದತ್ತಿನಿಧಿಗಳು ಇಲ್ಲದೇ ಇರುವ ಶಾಸ್ತ್ರಗಳಿಗೆ ಸಂಬಂಧಪಟ್ಟಂತೆ ಸ್ವರ್ಣಪದಕಗಳನ್ನು ನೀಡುವ ಬಗ್ಗೆ ತೀರ್ಮಾನಿಸುವ ಅಧಿಕಾರ ವಿಶ್ವವಿದ್ಯಾಲಯದ ವಿವೇಚನಾಧಿಕಾರವಾಗಿರುತ್ತದೆ. |
| | ನಿರ್ಣಯ | **ಘಟಿಕೋತ್ಸವಗಳಲ್ಲಿ ಸ್ವರ್ಣ ಪದಕ ನೀಡಲು ಮೇಲ್ಕಂಡ ನಿಯಮಾವಳಿಗೆ ಸಭೆಯು ಅನುಮೋದಿಸಿತು.** |

| | | |
|---|---|---|
| ವಿಷಯ 17 | | **ಎಲ್ಲಾ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ತರಗತಿಗಳಿಗೆ ಸಮಾನವಾದ ಪತ್ರಿಕೆ ಸಂಖ್ಯೆ ಹಾಗೂ ಉತ್ತೀರ್ಣತಾ ಶೇಕಡವನ್ನು ನಿರ್ಣಯಿಸುವ ಬಗೆಗೆ** |
| | ವಿಷಯ ಮತ್ತು ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಲ್ಲಾ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ತರಗತಿಗಳಿಗೆ ಆಂತರಿಕ ಪರೀಕ್ಷೆಗಳಿಗೆ ಅವಕಾಶ ನೀಡದೆ ಶೇ. 100ರಷ್ಟು ಅಂಕಗಳಿಗೆ ಲಿಖಿತ ಪರೀಕ್ಷೆಗಳನ್ನು ಮಾತ್ರ ಕಡ್ಡಾಯಗೊಳಿಸಿ ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗೆ ಸಲ್ಲಿಸಿದೆ. ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಟಿಫಿಕೇಟ್ ತರಗತಿಗಳಿಗೆ ಎರಡು ಪತ್ರಿಕೆಗಳು ಸೀಮಿತವಿದ್ದು, ಜ್ಯೋತಿಷ್ಯ ಶಾಸ್ತ್ರದ ಸರ್ಟಿಫಿಕೇಟ್ ತರಗತಿಗಳಿಗೆ ಮಾತ್ರ ನಾಲ್ಕು ಪತ್ರಿಕೆಗಳು ಇರುತ್ತವೆ. ಈ ಅಸಮಾನತೆಯನ್ನು ರದ್ದುಪಡಿಸಿ ಜ್ಯೋತಿಷ್ಯ ಶಾಸ್ತ್ರದ ಸರ್ಟಿಫಕೇಟ್‌ಗೂ ಸಹ ಎರಡು ಪತ್ರಿಕೆಗಳನ್ನು ಸೀಮಿತಗೊಳಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಸಲ್ಲಿಸಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದ ಎಲ್ಲಾ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ತರಗತಿಗಳಿಗೆ ಸಮಾನವಾದ ಪತ್ರಿಕೆ ಸಂಖ್ಯೆ ಹಾಗೂ ಉತ್ತೀರ್ಣತಾ ಶೇಕಡವನ್ನು ಪಾಲಿಸಿ ಎಲ್ಲಾ ಸರ್ಟಿಫಿಕೇಟ್ ಕೋರ್ಸ್‌ಗಳಲ್ಲಿ ಸಮಾನತೆಯನ್ನು ಕಾಯ್ದುಕೊಳ್ಳಲು ಸಭೆಯು ಸೂಚಿಸಿತು.** |
| ವಿಷಯ 18 | | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಕ್ರಮಗಳನ್ನು ಬದಲಾಯಿಸುವ ಬಗೆಗೆ.**<br>ಸಂಸ್ಕೃತ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ಹಾಗೂ ವೇದ ಪ್ರಥಮಾ, ಪ್ರವೇಶ, ಮೂಲ ತರಗತಿಗಳ ಪ್ರಸಿದ್ಧ ಪರೀಕ್ಷೆಗಳಿಗೆ ಸಂಬಂಧಿಸಿದಂತೆ 2015–16ನೇ ಸಾಲಿನಲ್ಲಿ ಕಂಡುಬಂದ ಲೋಪದೋಷಗಳ ಆಧಾರದ ಮೇಲೆ ಚರ್ಚಿಸಲು ಪ್ರೋ. ವಿ. ಗಿರೀಶ್‌ಚಂದ್ರ, ನಿರ್ದೇಶಕರು, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ. ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ದಿನಾಂಕ: 07.09.2016ರಂದು ಸಭೆಯನ್ನು ಸೇರಿ ಚರ್ಚಿಸಿ ತೀರ್ಮಾನಗಳನ್ನು ಕೈಗೊಂಡಿರುತ್ತದೆ. ಸದರಿ ಸಮಿತಿಯ ನಿರ್ಣಯಗಳನ್ನು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗೆ ಸಲ್ಲಿಸಲಾಗಿದೆ. ನಿರ್ಣಯಗಳು ಈ ಕೆಳಕಂಡಂತಿವೆ.<br><br>i. **ಸಾಹಿತ್ಯ ಪರೀಕ್ಷೆಯಲ್ಲಿ ಗುಣಮಟ್ಟವನ್ನು ಕಾಪಾಡಲು ಹಾಗೂ ಪರೀಕ್ಷಾ ಅವ್ಯವಹಾರವನ್ನು ತಡೆಯಲು ಪರೀಕ್ಷಾ ಕೇಂದ್ರಗಳನ್ನು ನಿರ್ದಿಷ್ಟಪಡಿಸುವ ಬಗೆಗೆ.**<br>**ತೀರ್ಮಾನ:** ಪರೀಕ್ಷಾ ಕೇಂದ್ರಗಳನ್ನು ವಲಯವಾರು, ಜಿಲ್ಲಾವಾರು ನಡೆಸುವುದು ಸೂಕ್ತವೆಂದು ಸಮಿತಿ ಭಾವಿಸುತ್ತದೆ. ಇದರಿಂದ ಪರೀಕ್ಷಾ ಕೇಂದ್ರಗಳ ಸಂಖ್ಯೆಯನ್ನು ಆದಷ್ಟೂ ಕಡಿಮೆಗೊಳಿಸುವುದಕ್ಕೆ ಮತ್ತು ನಿಷ್ಪಕ್ಷಪಾತವಾಗಿ ಪರೀಕ್ಷೆ ನಡೆಸಲು ಸಾಧ್ಯವಾಗುತ್ತದೆ. ಹಾಗೇ ಅನುದಾನ ರಹಿತ ಪಾಠಶಾಲಾ ಪರೀಕ್ಷಾ ಕೇಂದ್ರಗಳನ್ನು ರದ್ದುಪಡಿಸಿ, ನಿರ್ದೇಶನಾಲಯ ನಿರ್ದಿಷ್ಟಪಡಿಸಿದ ಹಾಗೂ ಸಮೀಪದ ಕೇಂದ್ರಗಳಲ್ಲಿ ಅವಕಾಶ ಕಲ್ಪಿಸಿದರೆ ಹೊರಗಿನವರ ಆರೋಪಗಳಿಗೆ ಅವಕಾಶವಿರುವುದಿಲ್ಲ.<br><br>ii. **ಕಾವ್ಯ ಸಾಹಿತ್ಯ ಪರೀಕ್ಷೆಗಳ ಶ್ರೇಣಿಯನ್ನು ನಿಗದಿಪಡಿಸುವ ಬಗೆಗೆ.**<br>**ತೀರ್ಮಾನ:** ಸಂಸ್ಕೃತ ಪ್ರಥಮ, ಕಾವ್ಯ ಹಾಗೂ ಸಾಹಿತ್ಯ ಮತ್ತು ವೇದ ಪ್ರಥಮಾ, ವೇದ ಮೂಲ ಹಾಗೂ ವೇದ ಪ್ರವೇಶ, ತರಗತಿಗಳಿಗೆ ಉತ್ತೀರ್ಣರಾಗಲು ಪ್ರತಿ ಪತ್ರಿಕೆಗೆ ಕನಿಷ್ಠ ಶೇಕಡ 30ರಷ್ಟು ಅಂಕಗಳನ್ನು ಕಡ್ಡಾಯಗೊಳಿಸಲಾಗಿದೆ. ಆದರೆ ಸರಾಸರಿಯಾಗಿ ಶೇಕಡ 35ರಷ್ಟು ಅಂಕಗಳು ಪಡೆಯಬೇಕಾಗಿರುತ್ತದೆ. ಶೇಕಡ 35–49 ಅಂಕಗಳನ್ನು ಪಡೆದುಕೊಂಡವರಿಗೆ 'ಉತ್ತೀರ್ಣ' ಎಂದು, ಶೇಕಡ 50–59 ಅಂಕಗಳನ್ನು ಪಡೆದುಕೊಂಡವರಿಗೆ 'ದ್ವಿತೀಯಶ್ರೇಣಿ' ಎಂತಲೂ, ಶೇಕಡ 60 ಮತ್ತು 60ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದುಕೊಂಡವರಿಗೆ 'ಪ್ರಥಮಶ್ರೇಣಿ' ಎಂದು ನೀಡುತ್ತಿದ್ದು, ಅದೇ ಪದ್ಧತಿಯನ್ನು ಮುಂದುವರೆಸಲು ಸಭೆಯು ತೀರ್ಮಾನಿಸಿತು.<br><br>iii. **ಕಾವ್ಯ ಸಾಹಿತ್ಯ ಪರೀಕ್ಷಾ ಪತ್ರಿಕೆಗಳನ್ನು ಮರುಮೌಲ್ಯಮಾಪನ, ಮರುಎಣಿಕೆಗಳಿಗೆ ಶುಲ್ಕ ನಿಗದಿಪಡಿಸುವ ಬಗೆಗೆ.**<br>**ತೀರ್ಮಾನ:** ಕಾವ್ಯ, ಸಾಹಿತ್ಯ ತರಗತಿಗಳಿಗೆ ಮರುಮೌಲ್ಯಮಾಪನವನ್ನು ಸಭೆಯು ಒಪ್ಪಿದ್ದು, ಈ ಕೆಳಕಂಡಂತೆ ಶುಲ್ಕವನ್ನು ನಿಗದಿಪಡಿಸಬಹುದು.<br>ಅ) ಮರು ಎಣಿಕೆಗೆ ಕಾವ್ಯ ತರಗತಿಗಳಿಗೆ ಪ್ರತಿ ಪತ್ರಿಕೆಗೆ ರೂ. 100/– ಮತ್ತು ಸಾಹಿತ್ಯ ತರಗತಿಗಳಿಗೆ ಪ್ರತಿ ಪತ್ರಿಕೆಗೆ ರೂ. 200/–.<br>ಆ) ಮರುಮೌಲ್ಯಮಾಪನಕ್ಕೆ ಕಾವ್ಯ ತರಗತಿಗಳಿಗೆ ಪ್ರತಿ ಪತ್ರಿಕೆಗೆ ರೂ. 200/– ಮತ್ತು ಸಾಹಿತ್ಯ ತರಗತಿಗಳಿಗೆ ಪ್ರತಿ ಪತ್ರಿಕೆಗೆ ರೂ. 400/–.<br><br>**iv. ಮಾಹಿತಿ ಪುಸ್ತಕದಲ್ಲಿ ವೇದ ವಿದ್ಯಾರ್ಥಿಗಳಿಗೆ ಭಾಷಾ ಪತ್ರಿಕೆ ಒಂದನ್ನು ಮಾತ್ರ ಬರೆಯಲು ಸೂಚಿಸಿದ್ದು, ಅಧಿಸೂಚನೆಯಲ್ಲಿ ಎರಡು ಭಾಷಾ ಪತ್ರಿಕೆ ಬರೆಯಬೇಕೆಂದಿರುವುದರಿಂದ ಗೊಂದಲವಾಗಿದೆ. ಈ** |

| | | |
|---|---|---|
| | | **ಗೊಂದಲವನ್ನು ನಿವಾರಿಸುವ ಬಗೆಗೆ.**<br>**ತೀರ್ಮಾನ:** ವೇದ ವಿದ್ಯಾರ್ಥಿಗಳಿಗೆ ಎರಡು ಭಾಷಾ ಪತ್ರಿಕೆಗಳು, ಒಂದು ಸಂಸ್ಕೃತ ವ್ಯಾಕರಣ ಪತ್ರಿಕೆ. ಉಳಿದ ಮೂರು ಪತ್ರಿಕೆಗಳನ್ನು ಮೌಖಿಕ ಪರೀಕ್ಷೆಗಳಾಗಿ ಇದುವರೆಗೂ ನಡೆಸುತ್ತಾ ಬರಲಾಗಿದೆ. ಸಂಸ್ಕೃತ ಭಾಷಾ ಪತ್ರಿಕೆಯಲ್ಲಿ ವ್ಯಾಕರಣ ಅಂಶಗಳು ಬರುವುದರಿಂದ ವ್ಯಾಕರಣ ಪತ್ರಿಕೆಯನ್ನು ರದ್ದುಗೊಳಿಸುದು ಸೂಕ್ತವೆಂದು ಸಮಿತಿ ಭಾವಿಸಿತು. ಉಳಿದಂತೆ ಪ್ರಥಮ ಭಾಷಾ ಪತ್ರಿಕೆ ಸಂಸ್ಕೃತ ಮತ್ತು ದ್ವಿತೀಯ ಭಾಷಾ ಪತ್ರಿಕೆ ಇಂಗ್ಲೀಷ್ ಕಡ್ಡಾಯವೆಂದು ಹಾಗೂ ನಾಲ್ಕು (04) ಪತ್ರಿಕೆಗಳಲ್ಲಿ ಮೌಖಿಕ ಪರೀಕ್ಷೆಯನ್ನು ವೇದ ವಿದ್ಯಾರ್ಥಿಗಳು ತೆಗೆದುಕೊಳ್ಳಬೇಕಾಗಿರುತ್ತದೆ ಎಂದು ಸಮಿತಿ ತೀರ್ಮಾನಿಸಿತು. |
| | ನಿರ್ಣಯ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರೀಕ್ಷಾ ಕ್ರಮಗಳಿಗೆ ಸಂಬಂಧಿಸಿದಂತೆ i, ii, iii ಗಳಿಗೆ ಸಭೆಯು ಒಪ್ಪಿಗೆಯನ್ನು ಸೂಚಿಸಿತು. ivಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಕ್ರಮವನ್ನು ಹಿಂದಿನಂತೆ ಮುಂದುವರಿಸಲು ಸಭೆಯು ಒಪ್ಪಿತು.** |
| ವಿಷಯ 19 | ವಿಷಯ ಮತ್ತು ಟಿಪ್ಪಣಿ | **ಮೌಲ್ಯಮಾಪನ ದರವನ್ನು ಹೆಚ್ಚಿಸಿದ್ದು ಘಟನೋತ್ತರ ಅನುಮತಿ ಪಡೆಯುವ ಬಗೆಗೆ.**<br>ಕಡತ ಸಂಖ್ಯೆ: ಕಸಂವಿ/ಪರೀಕ್ಷಾಂಗ/ಮೌಲ್ಯಮಾಪನ/2014–15 ರ ಮಾನ್ಯ ಕುಲಪತಿಗಳ ಒಪ್ಪಿಗೆ ಕಂಡಿಕೆ ಸಂಖ್ಯೆ:54 ದಿನಾಂಕ:30.03.2016 ರ ಪ್ರಕಾರ ಮೌಲ್ಯಮಾಪನಕ್ಕಾಗಿ ಒಂದು ಪತ್ರಿಕೆಗೆ ಈ ಕೆಳಕಂಡಂತೆ ದರವನ್ನು ನಿಗದಿಪಡಿಸಲಾಗಿರುತ್ತದೆ.<br>1. ಸ್ನಾತಕ ಪದವಿ – 8 ರಿಂದ 10ರೂಗಳಿಗೆ ಹೆಚ್ಚಿಸಲಾಗಿದೆ. ಹಾಗೂ ಇದು ಡಿಪ್ಲೋಮಾ ಸರ್ಟಿಫಿಕೇಟ್ ಕೋರ್ಸ್‌ಗಳಿಗೂ ಅನ್ವಯವಾಗುತ್ತದೆ.<br>2. ಸ್ನಾತಕೋತ್ತರ ಪದವಿ – 10 ರಿಂದ 12 ರೂಗಳಿಗೆ ಹೆಚ್ಚಿಸಲಾಗಿದೆ.<br>ಮೇಲ್ಕಂಡಂತೆ ಮೌಲ್ಯಮಾಪನ ದರವನ್ನು ನಿಗದಿಪಡಿಸಲಾಗಿದ್ದು, ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗೆ ಸಲ್ಲಿಸಿದೆ. |
| | ನಿರ್ಣಯ | **ಮೌಲ್ಯಮಾಪನ ದರವನ್ನು ಪರಿಷ್ಕರಿಸಲು ಸಭೆಯು ಒಪ್ಪಿಗೆ ಸೂಚಿಸಿತು.** |
| ವಿಷಯ 20 | ವಿಷಯ ಮತ್ತು ಟಿಪ್ಪಣಿ | **ಕೇಂದ್ರೀಕೃತ ಮೌಲ್ಯಮಾಪನ ಕಾರ್ಯಕ್ಕಾಗಿ ಹಾಗೂ ಕೇಂದ್ರೀಕೃತ ಪ್ರಶ್ನೆಪತ್ರಿಕೆ ತಯಾರಿಕಾ ಕಾರ್ಯಕ್ಕಾಗಿ ಆಗಮಿಸುವ ವಿದ್ವಾಂಸರಿಗೆ ಸಮಾನವಾದ ದಿನಭತ್ಯೆಯನ್ನು ನೀಡುವ ಬಗೆಗೆ**<br>ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ನಾತಕ ಹಾಗೂ ಸ್ನಾತಕೋತ್ತರ ತರಗತಿಗಳ ಪ್ರಶ್ನೆ ಪತ್ರಿಕೆ ತಯಾರಿಕೆ ಮತ್ತು ಮೌಲ್ಯಮಾಪನ ಕಾರ್ಯಗಳಲ್ಲಿ ವಿವಿಧ ವೇತನಶ್ರೇಣಿಯಲ್ಲಿ ಇರುವವರು ಹಾಗೂ ವೇತನ ಶ್ರೇಣಿ ರಹಿತರಾದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಕಾರಣ ವೇತನ ಶ್ರೇಣಿಗೆ ತಕ್ಕಂತೆ ದಿನಭತ್ಯೆಗಳನ್ನು ನೀಡುವ ಬದಲು ಪ್ರಶ್ನೆಪತ್ರಿಕೆ ತಯಾರಿಕೆ ಮತ್ತು ಮೌಲ್ಯಮಾಪನ ಕಾರ್ಯಗಳಲ್ಲಿ ಕಾರ್ಯನಿರತರಾಗುವ ಎಲ್ಲಾ ಉಪನ್ಯಾಸಕರಿಗೆ ಸಮಾನವಾದ ದಿನಭತ್ಯೆಯನ್ನು 300/– ರೂಗಳಿಗೆ ನಿಗದಿಪಡಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗೆ ಸಲ್ಲಿಸಿದೆ. |
| | ನಿರ್ಣಯ | **ಸಭೆಯು ಒಪ್ಪಿತು.** |
| ವಿಷಯ 21 | ವಿಷಯ ಮತ್ತು ಟಿಪ್ಪಣಿ | **ಪರೀಕ್ಷಾ ಕಾರ್ಯಗಳಿಗಾಗಿ ಹೊರ ಪ್ರಾಂತ್ಯದಿಂದ ಆಗಮಿಸುವ ವಿದ್ವಾಂಸರಿಗೆ ಪ್ರಯಾಣ ಭತ್ಯೆಯನ್ನು ನಿರ್ಧರಿಸುವ ಬಗೆಗೆ**<br>ಪರೀಕ್ಷಾ ಕಾರ್ಯಗಳಿಗಾಗಿ ಹೊರ ಪ್ರಾಂತ್ಯದಿಂದ ಆಗಮಿಸುವ ವಿದ್ವಾಂಸರು ಬಹುತೇಕ ಖಾಸಗೀ ಬಸ್ಸುಗಳಲ್ಲಿ ಪ್ರಯಾಣಿಸುವುದು ಕಂಡುಬಂದಿದ್ದು, ಕೆ.ಸಿ.ಎಸ್.ಆರ್ ನಿಯಮಗಳಲ್ಲಿ ಖಾಸಗೀ ಬಸ್ಸುಗಳ ಉಲ್ಲೇಖ ಇಲ್ಲದೇ ಇರುವುದರಿಂದ ಪ್ರಯಾಣ ಭತ್ಯೆಗಳನ್ನು ನೀಡುವಾಗ ಗೊಂದಲಕ್ಕೆ ಕಾರಣವಾಗಿರುತ್ತದೆ. ಇದನ್ನು ಪರಿಗಣಿಸಿದಂತೆ ಪ್ರಯಾಣಕ್ಕೆ ಇಂಥದ್ದೇ ಬಸ್‌ನಲ್ಲಿ ಬರಬೇಕೆಂಬ ನಿಯಮವನ್ನು ಸಡಿಲಿಸಿ, ಟಿಕೆಟ್‌ನ್ನು ಸಲ್ಲಿಸಿದ ಪಕ್ಷದಲ್ಲಿ ಪ್ರಯಾಣಭತ್ಯೆಯನ್ನು ನೀಡಲು ಪ್ರಶಿಕ್ಷಣ ಪರಿಷತ್ತಿನ ಒಪ್ಪಿಗೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ಒಪ್ಪಿತು.** |
| ವಿಷಯ 22 | ವಿಷಯ ಮತ್ತು ಟಿಪ್ಪಣಿ | **ಪರೀಕ್ಷಾ ಕಾರ್ಯಗಳಿಗಾಗಿ ಹೊರ ಪ್ರಾಂತ್ಯದಿಂದ ಆಗಮಿಸುವ ವಿದ್ವಾಂಸರಿಗೆ ಸ್ಥಳಿಯ ಆಟೋ ವೆಚ್ಚ ನೀಡುವ ಬಗೆಗೆ.**<br>ಪರೀಕ್ಷಾ ಕಾರ್ಯಗಳಿಗೆ ಸಂಬಂಧಪಟ್ಟಂತೆ ಕಾರ್ಯಗಳನ್ನು ನಿರ್ವಹಿಸಲು ಹೊರ ಪ್ರಾಂತ್ಯದಿಂದ ಬರುವ ಶಿಕ್ಷಕರು/ ವಿದ್ವಾಂಸರಿಗೆ ಸ್ಥಳಿಯ ಆಟೋ ವೆಚ್ಚವಾಗಿ ಬರಲು ಮತ್ತು ಹೋಗಲು ನೂರು ರೂಗಳನ್ನು (100+100=200) ಕೊಡುವುದಕ್ಕೆ ಪ್ರಶಿಕ್ಷಣ ಪರಿಷತ್ತಿನ ಅನುಮತಿಗೆ ಸಲ್ಲಿಸಿದೆ. |
| | ನಿರ್ಣಯ | **ಸಭೆಯು ಒಪ್ಪಿತು.** |

| | | |
|---|---|---|
| ವಿಷಯ 23 | ವಿಷಯ ಮತ್ತು ಟಿಪ್ಪಣಿ | **ತಾತ್ಕಾಲಿಕ ಪದವಿ ಪ್ರಮಾಣಪತ್ರ (Provisional Degree Certificate) ಶುಲ್ಕ ನಿರ್ಧರಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಒರಿಜಿನಲ್ ಪದವಿ ಪ್ರಮಾಣಪತ್ರಕ್ಕಾಗಿ ಈಗಾಗಲೇ ರೂ 500/– ಶುಲ್ಕ ನಿಗದಿಯಾಗಿದೆ. ಆದರೆ ತಾತ್ಕಾಲಿಕ ಪದವಿ ಪ್ರಮಾಣ ಪತ್ರಕ್ಕೆ ಶುಲ್ಕ ನಿಗದಿಯಾಗಿಲ್ಲ. ಈ ಸಾಲಿನಿಂದ ರೂ 300/– ಶುಲ್ಕಗಳನ್ನು ನಿಗದಿಪಡಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗೆ ಸಲ್ಲಿಸಿದೆ. |
| | ನಿರ್ಣಯ | **ತಾತ್ಕಾಲಿಕ ಪದವಿ ಪ್ರಮಾಣಪತ್ರದ ಶುಲ್ಕ ನಿಗದಿಗೆ ಸಭೆಯು ಒಪ್ಪಿತು.** |
| ವಿಷಯ 24 | ವಿಷಯ ಮತ್ತು ಟಿಪ್ಪಣಿ | **ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯ ಅಧೀಕ್ಷಕರ ಗೌರವ ಧನವನ್ನು ಹೆಚ್ಚಿಸುವ ಬಗೆಗೆ.**<br>ಪರೀಕ್ಷಾ ಕೇಂದ್ರಗಳಲ್ಲಿ ಕೊಠಡಿ ಮೇಲ್ವಿಚಾರಕರಿಗೆ ಒಂದು ಅವಧಿಗೆ 50/–ರೂಗಳು ಗೌರವ ಧನವೆಂದು ನಿಗದಿಯಾಗಿರುತ್ತದೆ. ಮುಖ್ಯ ಅಧೀಕ್ಷಕರಿಗೆ ಒಂದು ದಿನಕ್ಕೆ (ಎರಡು ಅವಧಿಗೆ) 100/–ರೂಗಳೆಂದು ನಿಗದಿಯಾಗಿರುತ್ತದೆ. ಹೀಗಾಗಿ ಕೊಠಡಿ ಮೇಲ್ವಚಾರಕರು ಹಾಗೂ ಮುಖ್ಯ ಅಧೀಕ್ಷಕರು ಇಬ್ಬರಿಗೂ ಒಂದೇ ವಿಧವಾದ ಗೌರವ ಧನ ನೀಡುವುದು ಸೂಕ್ತವಲ್ಲ, ಮುಖ್ಯ ಅಧೀಕ್ಷಕರಿಗೆ ಜವಾಬ್ದಾರಿ ಹೆಚ್ಚಿರುವ ಕಾರಣ ಕೊಠಡಿ ಮೇಲ್ವಿಚಾರಕರಿಗಿಂತಲೂ ಸ್ವಲ್ಪ ಪರಿಮಾಣದಲ್ಲಿ ಗೌರವ ಧನವನ್ನು ಹೆಚ್ಚಿಸಬೇಕೆಂದು ಕೆಲವು ಪ್ರಾಚಾರ್ಯರು ವಿನಂತಿಸಿಕೊಂಡಿರುತ್ತಾರೆ. ಅವರ ವಿನಂತಿ ನ್ಯಾಯಸಮ್ಮತಿಯಾಗಿರುವ ಕಾರಣ ಮುಖ್ಯ ಅಧೀಕ್ಷಕರು ಒಂದು ಅವಧಿಗೆ ರೂ 65/– ಅಂದರೆ ದಿನಕ್ಕೆ 130 (65+65) ಗೌರವಧನವೆಂದು ನಿಗಧಿಪಡಿಸಲು ಪ್ರಶಿಕ್ಷಣ ಪರಿಷತ್ತಿನ ಅನುಮತಿಯನ್ನು ಕೋರಿದೆ. ಈ ಪ್ರಸ್ತಾಪ ವಿಶ್ವವಿದ್ಯಾಯದ ವ್ಯಾಪ್ತಿಯಲ್ಲಿ ಬರುವ ಸಂಸ್ಕೃತ ವಿದ್ವತ್ ಪರೀಕ್ಷೆಗಳಿಗೆ ಸಂಬಂಧಿಸಿದ್ದಾಗಿರುತ್ತದೆ. ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ಪಾಠಶಾಲೆಗಳಿಗೆ ಅನ್ವಯಿಸಿರುವುದಿಲ್ಲ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗೆ ಸಲ್ಲಿಸಿದೆ. |
| | ನಿರ್ಣಯ | **ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯ ಅಧೀಕ್ಷಕರ ಗೌರವ ಧನವನ್ನು ಹೆಚ್ಚಿಸಲು ಸಭೆಯು ಅನುಮೋದಿಸಿತು.** |
| ವಿಷಯ 25 | ವಿಷಯ ಮತ್ತು ಟಿಪ್ಪಣಿ | **ಪರೀಕ್ಷಾ ಕೇಂದ್ರಗಳಿಗೆ ನೀಡುವ ಹಣಗಳಲ್ಲಿ ಸಾದಿಲ್ವಾರು ಹಣವನ್ನು ನಿರ್ಧರಿಸುವ ಬಗೆಗೆ.**<br>ಪರೀಕ್ಷೆಯ ಸಮಯದಲ್ಲಿ ಸ್ಟೇಷನರಿ ಖರೀದಿಸಲು, ಪರೀಕ್ಷೆಯ ಆನಂತರ ಉತ್ತರ ಪತ್ರಿಕೆಗಳ ಪ್ಯಾಕಿಂಗ್ ಹಾಗೂ ಪೋಸ್ಟೇಜ್ ವೆಚ್ಚದ ಸಲುವಾಗಿ ಒಬ್ಬ ವಿದ್ಯಾರ್ಥಿಗೆ 5/–ರೂಗಳ ಲೆಕ್ಕದಲ್ಲಿ ಪರೀಕ್ಷಾ ಕೇಂದ್ರಗಳಿಗೆ ಸಾದಿಲ್ವಾರು ವೆಚ್ಚವನ್ನು ನೀಡುತ್ತಾ ಬಂದಿದ್ದೇವೆ. ಆದರೆ ಸುಮಾರು ಪರೀಕ್ಷಾ ಕೇಂದ್ರಗಳಲ್ಲಿ 30ಕ್ಕಿಂತಲೂ ಕಡಿಮೆ ವಿದ್ಯಾರ್ಥಿಗಳು ಇರುವ ಪಕ್ಷದಲ್ಲಿ ಅವರಿಗೆ ನೀಡುವ ಸಾದಿಲ್ವಾರು ಹಣ ಸಾಲುವುದಿಲ್ಲ. ಇದಕ್ಕೆ ಬದಲಾಗಿ ಅಗತ್ಯಕ್ಕನುಗುಣವಾಗಿ ಖರ್ಚು ಮಾಡಿ ಪಾವತಿ ಬಿಲ್ಲನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ, ಹಣ ಪಡೆಯುವುದಕ್ಕೆ ಅನುಮತಿ ಕೋರಿದೆ. ಇದು ನಿರ್ದೇಶನಾಲಯಕ್ಕೆ ಅನ್ವಯವಾಗುವುದಿಲ್ಲ. ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗೆ ಸಲ್ಲಿಸಿದೆ. |
| | ನಿರ್ಣಯ | **ಸಭೆಯು ಒಪ್ಪಿಗೆ ಸೂಚಿಸಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | |
| ವಿಷಯ 01 | ವಿಷಯ ಮತ್ತು ಟಿಪ್ಪಣಿ | **ಶ್ರೀ ಎಸ್.ಎಂ.ಎಸ್.ಪಿ. ಸಂಶೋಧನಾ ಕೇಂದ್ರ, ಉಡುಪಿ –ಈ ಸಂಸ್ಥೆಗೆ 'ಸಂಶೋಧನ ಕೇಂದ್ರ'ದ ಮಾನ್ಯತೆ ನೀಡುವ ಬಗೆಗೆ.**<br>ಶ್ರೀ ಎಸ್.ಎಂ.ಎಸ್.ಪಿ. ಸಂಶೋಧನಾ ಕೇಂದ್ರ. ಉಡುಪಿ ಸದರಿ ಸಂಸ್ಥೆಗೆ ಮಾನ್ಯತೆ ನೀಡುವ ಸಂಬಂಧ ಈಗಾಗಲೇ ದಿನಾಂಕ 29.06.2016ರಂದು ಕುಲಸಚಿವರನ್ನೊಳಗೊಂಡ ಆರು ಸದಸ್ಯರ ಸಮಿತಿಯು ಭೇಟಿ ನೀಡಿ ಶಿಫಾರಸ್ಸು ಮಾಡಿರುತ್ತದೆ. ಮುಂದಿನ ನಿರ್ಣಯಕ್ಕಾಗಿ ಮಂಡಿಸಿದೆ. |
| | ನಿರ್ಣಯ | **ಎಸ್.ಎಂ.ಎಸ್.ಪಿ. ಸಂಶೋಧನಾ ಕೇಂದ್ರ, ಉಡುಪಿ –ಈ ಸಂಸ್ಥೆಗೆ 'ಸಂಶೋಧನ ಕೇಂದ್ರ'ದ ಮಾನ್ಯತೆ ನೀಡಲು ಸಭೆಯು ಒಪ್ಪಿಗೆ ಸೂಚಿಸಿತು.** |

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಪದ್ಮಾಶೇಖರ್**
ಅಧ್ಯಕ್ಷರು